# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 141 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ |
| ಉತ್ತರಿಸುವ ದಿನಾಂಕ | 05.07.2023 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತಿರುಪತಿ ಮತ್ತು ಮಂತ್ರಾಲಯದಲ್ಲಿರುವ ಕರ್ನಾಟಕ ವಸತಿ ನಿಲಯಗಳ ನಿರ್ವಹಣೆಗೆ ಇರುವ ಮಾನದಂಡಗಳೇನು: ಅವುಗಳನ್ನು ಪಾರದರ್ಶಕವಾಗಿ ನಿರ್ವಹಣೆ ಮಾಡಲಾಗಿದೆಯೇ: | ತಿರುಪತಿ ಮತ್ತು ಮಂತ್ರಾಲಯದಲ್ಲಿರುವ ವಸತಿ ನಿಲಯಗಳ ನಿರ್ವಹಣೆಯನ್ನು ಕರ್ನಾಟಕದ ಹೊರ ರಾಜ್ಯ ಛತ್ರಗಳ ನಿರ್ವಹಣೆಗಾಗಿ ರೂಪಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ:RD 139 Musevi 2009 ದಿನಾಂಕ:18.11.2010ರ ನಿಯಮಗಳಡಿ ನಿರ್ವಹಿಸಲಾಗುತ್ತಿದ್ದು, ಇವುಗಳನ್ನು ಪಾರದರ್ಶಕವಾಗಿ ನಿರ್ವಹಿಸಲಾಗುತ್ತಿದೆ. |
| ಆ) | ತಿರುಪತಿ ಮತ್ತು ಮಂತ್ರಾಲಯ ಧಾರ್ಮಿಕ ಕ್ಷೇತ್ರಗಳಲ್ಲಿ ಕರ್ನಾಟಕ ಭಕ್ತಾದಿಗಳಿಗೆ ವಸತಿ ಸೌಕರ್ಯಗಳು ಸಮರ್ಪಕವಾಗಿ ಇಲ್ಲದಿರುವುದು ಹಾಗೂ ಇರುವ ಸೌಲಭ್ಯಗಳಲ್ಲಿ ಸ್ವಚ್ಛತೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ., ಇದನ್ನು ಉತ್ತಮಪಡಿಸಲು ಯೋಜನೆಗಳನ್ನು ರೂಪಿಸಲಾಗಿರುತ್ತದೆ. |
| ಇ) | ಹಾಗಿದ್ದಲ್ಲಿ, ಸದರಿ ಸೌಕರ್ಯಗಳನ್ನು ಒದಗಿಸಲು ಹೊಸದಾಗಿ ಯೋಜನೆ ರೂಪಿಸಲಾಗಿದೆಯೇ: ಮತ್ತು ಹಾಲಿ ಇರುವ ಸೌಕರ್ಯ ಸ್ವಚ್ಛತೆ ಹಾಗೂ ಪಾರದರ್ಶಕತೆಯನ್ನು ತರಲು ಸರ್ಕಾರ ಯಾವ ರೀತಿ ಕ್ರಮಕೈಗೊಳ್ಳಲಿದೆ: | **<u>ತಿರುಮಲ</u>** :<br>• ಸರ್ಕಾರದ ಆದೇಶ ಸಂ:ಕಂಇ 07 ಮುಅಕಾ 2020 ದಿನಾಂಕ:30.06.2020 ರಲ್ಲಿ ತಿರುಮಲ ಕರ್ನಾಟಕ ರಾಜ್ಯ ಛತ್ರ ಜಾಗದಲ್ಲಿ ವಸತಿ ಗೃಹ, ಕಲ್ಯಾಣ ಮಂಟಪ ಮತ್ತು ಇತರ ಮೂಲಭೂತ ಸೌಕರ್ಯಗಳೊಂದಿಗೆ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಅಂದಾಜು ರೂ.200.00ಕೋಟಿಗಳ (ತೆರಿಗೆ ಹೊರತುಪಡಿಸಿ) ವೆಚ್ಚದಲ್ಲಿ ಕೈಗೊಳ್ಳಲು ಹಾಗೂ ಇದಕ್ಕೆ ತಗಲುವ ಯೋಜನೆಯ ಮೊತ್ತವನ್ನು ಟಿ.ಟಿ.ಡಿ. ಬೋರ್ಡ್‌ಗೆ ನೀಡಲು ಅನುಮತಿ ನೀಡಲಾಗಿರುತ್ತದೆ.<br>• ಸರ್ಕಾರದ ಆದೇಶ ಸಂಖ್ಯೆ:ಕಂಇ 07 ಮುಆಕಾ 2020 ದಿನಾಂಕ:16.11.2020 ಮತ್ತು ಆದೇಶ ಸಂಖ್ಯೆ:ಕಂಇ 270 ಮುಅಬಿ 2022 ದಿನಾಂಕ: 12.07.2022 ರಲ್ಲಿ ಕ್ರಮವಾಗಿ ರೂ.100-00ಕೋಟಿಗಳು ಮತ್ತು ರೂ102-00 ಕೋಟಿಗಳು ಸೇರಿ ಒಟ್ಟಾರೆ ರೂ.202-00 ಕೋಟಿಗಳನ್ನು ತಿರುಮಲ-ತಿರುಪತಿ ದೇವಾಲಯದ ಪ್ರಾಧಿಕಾರಕ್ಕೆ ಬಿಡುಗಡೆ ಮಾಡಲಾಗಿರುತ್ತದೆ.<br>• ಸದರಿ ಯೋಜನೆಯನ್ನು ಟಿ.ಟಿ.ಡಿ.ಯವರಿಗೆ ವಹಿಸಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | • ಪ್ರಸ್ತಾಪಿತ ಯೋಜನೆಯಲ್ಲಿ ಹಾಲಿ ಕರ್ನಾಟಕ ಪ್ರವಾಸಿ ಸೌಧದ ಕಟ್ಟಡದ ನವೀಕರಣವೂ ಸಹ ಒಳಗೊಂಡಿದ್ದು, ನವೀಕರಣ/ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡ ನಂತರ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.<br><br>**<u>ಮಂತ್ರಾಲಯ</u>** :-<br>• ಕರ್ನಾಟಕ ರಾಜ್ಯ ಛತ್ರದ ಆವರಣದಲ್ಲಿ ನೂತನವಾಗಿ 50 ಕೊಠಡಿಗಳ ವಸತಿ ಗೃಹವನ್ನು ನಿರ್ಮಾಣ ಮಾಡಿದ್ದು, ದಿನಾಂಕ:26.01.2022ರಂದು ಲೋಕಾರ್ಪಣೆಗೊಂಡಿದ್ದು, ಸದರಿ ಕಟ್ಟಡವನ್ನು ಭಕ್ತಾದಿಗಳ ಉಪಯೋಗಕ್ಕಾಗಿ ನೀಡಲಾಗುತ್ತಿದೆ.<br><br>ಸದರಿ ಛತ್ರಗಳಲ್ಲಿ ಸ್ವಚ್ಛತಾ ಕಾರ್ಯಗಳ ನಿರ್ವಹಣೆಗೆ ಸಿಬ್ಬಂದಿಗಳಿದ್ದು, ಮೇಲ್ವಿಚಾರಣೆಯನ್ನು ಕ್ರಮವಾಗಿ ನೋಡಿಕೊಳ್ಳಲು 'ಎ' ಮತ್ತು 'ಬಿ' ವೃಂದದ ಅಧಿಕಾರಿಗಳು ಇರುತ್ತಾರೆ. ಈ ಛತ್ರ (ವಸತಿ ನಿಲಯ)ಗಳ ಪಾರದರ್ಶಕ ನಿರ್ವಹಣೆಗಾಗಿ ಆನ್‌ಲೈನ್ ಮುಂಗಡ ಕಾಯ್ದಿರಿಸುವಿಕೆ (ಮೊಬೈಲ್ ಅಪ್), ಮತ್ತು ನಿರ್ವಹಣೆಗಾಗಿ ಟೆಂಡರ್ ಕರೆಯಲಾಗುತ್ತಿದೆ. |
| ಈ) | ತಿರುಪತಿ ಮತ್ತು ಮಂತ್ರಾಲಯದಲ್ಲಿ ಕರ್ನಾಟಕ ಭಕ್ತಾದಿಗಳಿಗೆ ನೀಡುವ ವಸತಿ ನಿಲಯಗಳ ನಿರ್ವಹಣೆ ಯನ್ನು ಯಾರಿಗೆ ವಹಿಸಲಾಗಿದೆ: ಯಾವ ಮಾನದಂಡ ಅನುಸರಿಸಿ ನೀಡಲಾಗಿದೆ? (ಪೂರ್ಣ ವಿವರ ನೀಡುವುದು) | ಶ್ರೀಕ್ಷೇತ್ರ ತಿರುಮಲ ಮತ್ತು ಮಂತ್ರಾಲಯದಲ್ಲಿರುವ ಕರ್ನಾಟಕ ರಾಜ್ಯ ಛತ್ರಗಳ ನಿರ್ವಹಣೆಯನ್ನು ಧಾರ್ಮಿಕ ದತ್ತಿ ಇಲಾಖೆಯು ನಿರ್ವಹಿಸುತ್ತಿದೆ.<br><br>ತಿರುಮಲ ಕರ್ನಾಟಕ ರಾಜ್ಯ ಛತ್ರದ ಆಡಳಿತವನ್ನು ವಿಶೇಷಾಧಿಕಾರಿಗಳು ಮತ್ತು ಮಂತ್ರಾಲಯ ಕರ್ನಾಟಕ ರಾಜ್ಯ ಛತ್ರದ ಆಡಳಿತವನ್ನು ಪತ್ರಾಂಕಿತ ವ್ಯವಸ್ಥಾಪಕರು ನಡೆಸುತ್ತಿದ್ದಾರೆ.<br><br>ಸದರಿ ಕ್ಷೇತ್ರಗಳಲ್ಲಿರುವ ಕರ್ನಾಟಕ ರಾಜ್ಯ ಛತ್ರ/ ವಸತಿ ನಿಲಯಗಳ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿಲ್ಲದಿರುವುದರಿಂದ, ಮಾನದಂಡದ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಕಂಇ 55 ಮುಸಪ್ರ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು